ದೇಹದೊಂದಿಗೆ ಕೂಡಿದರೇನು. ಅದರಲ್ಲಿ ಪವಿತ್ರತೆ, ಅಪವಿತ್ರತೆ ಏನು ಬಂತು? ತೃಪ್ತಿ ಮಾತ್ರವೇ ಮುಖ್ಯವಾಗುತ್ತದೆ. ಯಾವ ರಾಸಾಯನಿಕ ಇನ್ನೊಂದು ಯಾವ ರಾಸಾಯನಿಕದೊಂದಿಗೆ ಬೆರೆತರೇನು... ಎಂಡ್ ರಿಸಲ್ಟೇ ಮುಖ್ಯವಾಗುವುದು. ಜೀವಜಗತ್ತಿನಲ್ಲಿ ಮನುಷ್ಯ ಸಮುದಾಯದಲ್ಲಿ ಮಾತ್ರ ಪರಿಮಿತಿಗಳಿರುವುದು. ಅಂಥ ಪರಿಮಿತಿಗಳನ್ನು ಮೀರಿದಾಗ ಮನುಷ್ಯ ಅಪರಿಮಿತ ಆನಂದವನ್ನು ಪಡೆಯುವುದಾದರೂ ಏಕೆಂಬ ಪ್ರಶ್ನೆ ಋಗ್ವೇದಿಯವರಲ್ಲಿ ಅನ್ನಿಸಿದ ಆ ಕ್ಷಣ ಈಗಲೂ ಅವರಲ್ಲಿ ರೋಮಾಂಚನವನ್ನುಂಟುಮಾಡುತ್ತದೆ ನೆನಪಿಸಿಕೊಂಡರೆ. ಋಗ್ವೇದಿಯವರು ತಮ್ಮ ಸೇವಾವಧಿಯಲ್ಲಿ ಹದಿನೆಂಟು ಜನ ಪಿಎಚ್.ಡಿ. ವಿದ್ಯಾರ್ಥಿಗಳಿಗೆ ಗೈಡ್ ಆಗಿದ್ದಾರೆ. ಅವರೆಲ್ಲರೂ ಈಗ ಒಳ್ಳೊಳ್ಳೆಯ ಪೋಸ್ಟ್‌ಗಳಲ್ಲಿದ್ದಾರೆ. ಹಾಗೆ ಪಿಎಚ್.ಡಿ. ನೀಡಿದ ಯಾರ ಬಳಿಯೂ ಋಗ್ವೇದಿ ಯಾವ ಪ್ರತಿಫಲಾಪೇಕ್ಷೆಯನ್ನೂ ಪಡೆದವರಲ್ಲ, ನಿಧಿ ಅಲೆಗ್ಸಾಂಡರಳನ್ನು ಬಿಟ್ಟು! ಅವಳಿಗೆ ಪಿಎಚ್.ಡಿ. ಗೈಡ್ ಆಗಿದ್ದು ತಮ್ಮ ಐವತ್ತೈದನೆಯ ವಯಸ್ಸಿನಲ್ಲಿ. ಎಂ.ಎಸ್ಸಿ.ಯಲ್ಲೂ ತನ್ನ ವಿದ್ಯಾರ್ಥಿನಿಯಾಗಿದ್ದವಳು. ಎಂ.ಎಸ್ಸಿ. ಮುಗಿಸಿ, ಒಂದು ವರ್ಷ ಎಲ್ಲೋ ಕೆಲಸ ಮಾಡಿ ಬಂದು ಪಿಎಚ್.ಡಿ. ಎನ್ರೋಲ್ ಮಾಡಿಸಿ ಗೈಡ್ ಮಾಡಲು ತಮ್ಮನ್ನು ರಿಕ್ವೆಸ್ಟ್ ಮಾಡಿಕೊಂಡಾಗ ಋಗ್ವೇದಿ ಒಪ್ಪಿಕೊಂಡಿದ್ದರು. ''ಯಾವುದೋ ಒಂದು ಇಂಟರ್ ನ್ಯಾಷನಲ್ ಫಾರ್ಮಸಟಿಕಲ್ ಕಂಪನಿಯೊಂದರಲ್ಲಿ ದೊಡ್ಡ ಪ್ರಾಜೆಕ್ಟ್ ಸಿಗೋದಿದೆ. ಒಂದೇ ವರ್ಷದಲ್ಲಿ ಪಿಎಚ್.ಡಿ. ತಗೊಂಡು ಬರ್ತೀನಿ ಅಂತ ಮಾತು ಕೊಟ್ಟು ಬಂದಿದ್ದೀನಿ ಸಾರ್, ಇಟ್ಸ್ ಮೈ ಚಾಲೆಂಜ್ ಆಲ್ಸೋ. ಪ್ಲೀಸ್ ಹೆಲ್ಪ್ ಮಿ ಸರ್.'' ಎಂದು ಬೇಡಿಕೊಂಡಿದ್ದಳು. ''ಖಂಡಿತಾ ಹೆಲ್ಪ್ ಮಾಡ್ತೀನಿ, ಆದರೆ **Time constraint** ಬಗ್ಗೆ ನಾನು ಏನೂ ಹೇಳಲು ಬರೋದಿಲ್ಲ. ನಿನ್ನ ಎನರ್ಜಿ ಮತ್ತು ಇನ್ವಾಲ್ವ್‌ಮೆಂಟ್ ಆಲ್ಸೋ ಇಂಪಾರ್ಟೆಂಟ್.'' ಎಂದಿದ್ದರು ಋಗ್ವೇದಿ. ಸಿಲಬಸ್ ಬಗ್ಗೆ, ವಿಷಯ ನಿರೂಪಣೆಯ ಬಗ್ಗೆ, ಬುಕ್ಸ್ ರೆಫರೆನ್ಸ್ ಬಗ್ಗೆ ತಮ್ಮ ಚೇಂಬರ್‌ನಲ್ಲಿಯೇ ಸುಮಾರು ದಿನಗಳು ಲೆಕ್ಚರ್ ಕೊಟ್ಟಿದ್ದರು. ಅವಳ ಕಣ್ಣುಗಳಲ್ಲಿ ಎಂಥವರನ್ನಾದರೂ ಸೆಳೆಯುವ ಹೊಳಪು. ಒಮ್ಮೊಮ್ಮೆ ಋಗ್ವೇದಿಯವರು ಅಪಾರವಾಗಿ ವಿಚಲಿತರಾಗುತ್ತಿದ್ದರು. ಒಮ್ಮೆ ಮನೆಗೆ ಊಟಕ್ಕೆ ಬರುವಂತೆ ಆಹ್ವಾನಿಸಿದ್ದಳು. ಋಗ್ವೇದಿ ತಾವು ನಾನ್‌ವೆಜ್ ತಿನ್ನುವುದಿಲ್ಲವೆಂದು ತಮಾಷೆ ಮಾಡಿದ್ದರು. ಋಗ್ವೇದಿಯವರಿಗೆ ಮಠದಲ್ಲಿ ಓದುತ್ತಿರುವಾಗಲೇ ಮಾಂಸಾಹಾರದ ಬಗ್ಗೆ ಕುತೂಹಲವಿತ್ತು. ಆದರೆ, ಎಂ.ಎಸ್ಸಿ. ಓದಲು ಯೂನಿವರ್ಸಿಟಿ ಸೇರಿದ ಮೇಲೆ ಚಿಕನ್ ತಿಂದಿದ್ದರು. ನಂತರ ಕೆಲಸಕ್ಕೆ ಸೇರಿದ ಮೇಲೆ ಚಿಕನ್ ಮತ್ತು ಫಿಶ್ ಸಖತ್ತಾಗಿ ತಿನ್ನುವುದನ್ನು ಕಲಿತಿದ್ದರು. ಹಾಗೆಯೇ ಮಿತವಾಗಿ ರೆಗ್ಯುಲರಾಗಿ ಮದ್ಯ ಸೇವನೆಯನ್ನೂ ಕಲಿತಿದ್ದರು. ಯಾರಾದರೂ, ''ಏನು ಪ್ರೊಫೆಸರ್ ನೀವೂ ತಗೊತೀರಾ.'' ಎಂದು ಅಚ್ಚರಿ ಪಟ್ಟರೆ, ''ಅದೂ ಒಂದು ಕೆಮಿಕಲ್ ಅಲ್ವೇನ್ರಿ. ಕೆಮಿಕಲ್ಸ್ ಇಲ್ಲದೆ ಮಾನವ ಜೀವಿ ಬದುಕಲಿಕ್ಕೆ ಉಂಟೇನ್ರಿ. ಅಂಥ ಕೆಮಿಕಲ್ಸ್ ಹೆಚ್ಚಿನ ಅಗತ್ಯ ಇರೋದು ಪ್ರೊಫೆಸರುಗಳಿಗೆ ಅಲ್ವಾ.'' ಎಂದು ತಮಾಷೆ ಮಾಡುತ್ತಿದ್ದರು. ಹೆಂಡತಿಗೆ ಋಗ್ವೇದಿಯವರು ಹೊರಗಡೆ ನಾನ್‌ವೆಜ್ ತಿಂದು ಬರುತ್ತಿದ್ದುದ್ದರ ಬಗ್ಗೆ ಅನುಮಾನವಿತ್ತು. ಆದರೆ, ಎಂದೂ ಪ್ರಶ್ನಿಸುತ್ತಿರಲಿಲ್ಲ. ಈಗಂತೂ ಮಕ್ಕಳ ಮನೆಯಲ್ಲಿ ನಿತ್ಯವೂ ನಾನ್‌ವೆಜ್ಜೆ. ದನದ ಮಾಂಸ ಕೂಡಾ ಮಾಡುತ್ತಾರಂತೆ ಮಕ್ಕಳ ಮನೆಯಲ್ಲಿ.

ಅಂದು ನಾನ್‌ವೆಜ್ ತಿನ್ನುವುದಿಲ್ಲ ಎಂದಿದ್ದಕ್ಕೆ ನಿಧಿ ಅಲೆಗ್ಸಾಂಡರ್ ಕೆನ್ನೆ ತುಂಬಾ ನಗುವನ್ನು ಅರಳಿಸುತ್ತಾ, ''ಓಹ್, ನಂಗೊತ್ತು ಬನ್ನಿ ಸಾರ್. ಕೆಮಿಸ್ಟ್ರಿ ಪ್ರೊಫೆಸರ್ ನಾನ್‌ವೆಜ್ ತಿನ್ನಲ್ಲ ಅಂದರೆ ನಂಬಬೇಕು. ವ್ಹಾಟ್ ಎ ಜೋಕ್ ಸರ್. ಅಮೆರಿಕದಲ್ಲಿ ನಿಮ್ಮ ಮಕ್ಕಳು ಟನ್ ಗಟ್ಲೆ ನಾನ್‌ವೆಜ್ ತಿನ್ನೋದು ನಂಗೇನು ಗೊತ್ತಿಲ್ಲ ಅಂತ ತಿಳ್ಕೊಂಡಿದ್ದೀರಾ? ಇಷ್ಟಕ್ಕೂ ಇಡೀ ಜೀವ ಜಗತ್ತು ಸೃಷ್ಟಿಯಾಗಿರುವುದು ಮಾಂಸದಿಂದಲೇ ಅಲ್ವಾ ಸರ್. ಮೇಡಂನವರನ್ನೇನು ಕರ್ಕೊಂಡು